ಹೋಗಿ ಹೋಗಿ ಅವರ ಹತ್ತಿರ ನಿನ್ನದೇನೇ ಮಾತು. ನಾಳೆ ಬಾಳಿ ಬದುಕಬೇಡವೇ' ಅನ್ನುತ್ತಿದ್ದಳು. 'ಅದಕ್ಕೋಸ್ಕರಾನೇ ನಾನು ಅಜ್ಜಿ ಹತ್ತಿರ ಹೋಗುತ್ತಿರೋದು' ಅಂದಿದ್ದೆ. 'ನೀನೊಬ್ಬಳು ಬಾಕಿ ಇದ್ದೆ ನನಗೆ' ಎಂದು ಹಂಗಿಸುತ್ತಿದ್ದಳು.

ಅಜ್ಜಿಯ ಎರಡೂ ಸರಗಳೂ ಒಂದಕ್ಕೊಂದು ಗಂಟು ಹಾಕಿಕೊಂಡುಬಿಡುತ್ತಿದ್ದವು. ಆ ಗಂಟು ಬಿಡಿಸುವುದೇ ಅವಳಿಗೆ ಮುಖ್ಯ ಕೆಲಸ ಆಗಿರುತ್ತಿತ್ತು. ಒಂದೊಂದು ಸಲ ಬೇಸರದಿಂದ ಹೇಳುತ್ತಿದ್ದಳು, 'ರೇಜಿಗೆ ಬಂದಿದೆ ಕಣೆ. ಎರಡನ್ನೂ ಒಗೆದು ಬಿಡ್ತೀನಿ' ಅಂತ. ನಂತರ ಹೇಳುತ್ತಿದ್ದಳು 'ಅಲ್ವೇ... ನೀನೇ ಹೇಳು ಈ ಅರಳೀ ಎಲೆ ಶೇಷಮ್ಮಂಗೇ ಬೇರೆ ಸರ. ಆ ಫಕೀರನ ರುದ್ರಾಕ್ಷಿಗೇ ಬೇರೆ ಸರ ಕೊಟ್ಟಿದ್ದೀನಿ ತಾನೆ. ಮತ್ತೆ ಯಾಕೆ ಅವೆರಡು ಜಗಳ ಆಡುತ್ತವೆ?' ಅಂತ. 'ಸುಮ್ಮನೆ ಗಂಟು ಹಾಕಿಕೊಂಡು ನನಗೆ ಕಾಟ ಕೊಡ್ತ ಇವೆ ಅಷ್ಟೆ'.

ನಾನು ಹೇಳುತ್ತಿದ್ದೆ, 'ಹೌದು... ನೀನು ಅರಳೀ ಎಲೆ ಶೇಷಮ್ಮಂಗೆ ಬಂಗಾರದ ಸರ ಕೊಟ್ಟು, ರುದ್ರಾಕ್ಷಿಗೆ ಬರೀ ಕರೀದಾರ ಕೊಟ್ಟರೆ ಇನ್ನೇನಾಗುತ್ತೆ ಮತ್ತೆ?' ಅಂತ.

ಅವಳು ಜೋರಾಗಿ ನಕ್ಕು ಬಿಟ್ಟಿದ್ದಳು, 'ನೋಡಿದ್ಯಾ. ಎಷ್ಟು ಚೆನ್ನಾಗಿ ಹೇಳಿದೆ. ಆದರೆ ಶೇಷಮ್ಮ ಅರಳೀ ಎಲೇ ಮೇಲೆ ಇದ್ದರೂ ಅವಳ ಜೀವನ ಮಾತ್ರ ರುದ್ರಾಕ್ಷಿದೇ ಅಲ್ಲವೇ?' ನಕ್ಕಿದ್ದಳು. ಅದೇನು ವಿಷಾದವೋ ಅಥವಾ ಪೂರ್ಣ ತಿಳಿವಳಿಕೆಯೋ ಗೊತ್ತಿಲ್ಲ. ಮತ್ತೆ ಹೇಳಿದ್ದಳು, 'ನನ್ನದೊಂದು ವಾದ ಇದೆ ಕಣೆ. ಈ ರುದ್ರಾಕ್ಷಿಗೆ ಬಂಗಾರದ ಹಂಗು ಯಾಕೆ ಬೇಕು ಹೇಳು? ಶೇಷಮ್ಮನ ಜೊತೆ ಜಗಳ ಆಡೋಕೆ ಅದಕ್ಕೆ ಕಾರಣವೇ ಇಲ್ಲ ಅಲ್ಲವೇ?... ಅಥವಾ...' ಎಲ್ಲೋ ಮುಳುಗಿದಂತೆ ಹೇಳಿದಳು, 'ಕಾರಣ ಇರುವುದರಿಂದಲೇ ಅದು ಜಗಳ ಆಡ್ತಿದೆಯೇನೋ. ಆ ಕಾರಣ ನನ್ನಂತಹ ಅಜ್ಞಾನಿಗೆ ಹೇಗೆ ತಿಳಿಯಬೇಕು?' ತನ್ನದಲ್ಲದ ಮನೆ, ತನ್ನದಲ್ಲದ ಮಕ್ಕಳು, ತನ್ನದಲ್ಲದ ಸಂಬಂಧಗಳು... ಆದರೆ ಅವಳು ತನ್ನನ್ನು ಎಲ್ಲರಿಗೂ ಕೊಟ್ಟುಬಿಟ್ಟಿದ್ದಳು. ಅಡುಗೆ, ಊಟ, ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದು, ಹಪ್ಪಳ ಸಂಡಿಗೆ ಮಾಡುವುದು, ಉಪ್ಪಿನಕಾಯಿ ಹಾಕುವುದು... ಒಂದೇ ಎರಡೇ. ಯಾರಿಗೇ ಜ್ವರ, ಶೀತ, ನೆಗಡಿ ಏನೇ ಬರಲಿ ಅಜ್ಜಿಯ ಆರೈಕೆಯಲ್ಲಿ ಅವರು ಆನಂದವಾಗಿ ಓಡಾಡುತ್ತಿದ್ದರು. ನಾನು ಅವಳಿಗೆ ಸಹಾಯ ಮಾಡಲು ಹೋದಾಗಲೆಲ್ಲ ಹೇಳುತ್ತಿದ್ದಳು, 'ಬೇಡ ಬಿಡು ಪುಟ್ಟಿ... ಈ ಜಗಳ ಎಲ್ಲ ಶೇಷಮ್ಮ ಮತ್ತು ರುದ್ರಾಕ್ಷಿಗೇ ಇರಲಿ... ನೀನು ಇದರಲ್ಲಿ ಸಿಕ್ಕಿ ಹಾಕಿಕೊಳ್ಳಬೇಡ' ಅಂತ. ಅಮ್ಮನ ಬೈಗುಳ

